೫. ಸಹಕಾರಿ ಇಲಾಖೆಯ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯನ್ನು ಸರ್ಕಾರಿ ನೌಕರರಂತೆ ಪರಿಗಣಿಸುವುದು.

ಶ್ರೀ ಬಿ.ಎಂ. ಇದಿನಬ್ಬ (ಭಟ್ಕಳ).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಸಹಕಾರಿ ಇಲಾಖೆಯ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳನ್ನು ಸರಕಾರಿ ಸಿಬ್ಬಂದಿಗಳಂತೆ ಪರಿಗಣಿಸಬೇಕೆಂದು ಇಷ್ಟರಲ್ಲೇ ಸಹಕಾರಿ ಸಿಬ್ಬಂದಿಗಳ ಯೂನಿಯನ್‌ಗಳ ಮೂಲಕ ಚಳುವಳಿ ನಡೆಯುತ್ತದೆ. ಆದರೆ ಈವರೆಗೂ ಸಹಕಾರಿ ಸಿಬ್ಬಂದಿಗಳನ್ನು ಸರಕಾರಿ ಸಿಬ್ಬಂದಿಗಳೆಂದು ಪರಿಗಣಿಸಿಲ್ಲ. ಸರಕಾರಿ ಸಿಬ್ಬಂದಿಗಳ ಎಲ್ಲಾ ಸೌಕರ್ಯಗಳನ್ನು ಅವರಿಗೆ ನೀಡಿರುವುದಿಲ್ಲ. ಈ ಕುರಿತು ಸಹಕಾರಿ ಸಿಬ್ಬಂದಿಗಳ ವತಿಯಿಂದ ೨೩-೫-೧೯೮೮ರಂದು ವಿಧಾನಸೌಧ ಚಲೋ ಚಳುವಳಿ ಕೂಡ ನಡೆಯಲಿದೆ ಎಂದು ತಿಳಿದಿದೆ. ಆದಕಾರಣ ಸಹಕಾರಿ ಸಿಬ್ಬಂದಿಗಳನ್ನು ಸರಕಾರಿ ಸಿಬ್ಬಂದಿಗಳಂತೆ ಆದಷ್ಟು ಶೀಘ್ರ ಪರಿಗಣನೆಗೆ ತೆಗೆದು ಕೊಳ್ಳಲಾಗುವುದೇ ? ಈ ಕುರಿತಂತೆ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಈ ಸಹಕಾರ ಸಂಘ ಸಂಸ್ಥೆಗಳು ಸರ್ಕಾರಿ ಸಂಘ ಸಂಸ್ಥೆಗಳಲ್ಲ ಈ ಸಹಕಾರ ಸಂಘಗಳ ಸಿಬ್ಬಂದಿಗಳನ್ನು ನೇಮಕ ಮಾಡುವಾಗ ಮತ್ತು ಅವರಿಗೆ ಸೇವಾ ನಿಯಮಗಳ ಪ್ರಕಾರ ಸೌಲಭ್ಯಗಳನ್ನು ಕೊಡುವಾಗ ಆಯಾ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿ ಪರಿಶೀಲನೆ ಮಾಡಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಚಳುವಳಿ ನಡೆಯುತ್ತಿದೆ. ಈ ಚಳುವಳಿ ನಡೆಯುವುದು ಸರ್ಕಾರದ ಗಮನಕ್ಕೆ ಬಂದಿದೆ. ಆಯಾಯಾ ಸಹಕಾರ ಸಂಘಗಳ ಸಿಬ್ಬಂದಿಗೆ ಸೌಲಭ್ಯಗಳನ್ನು ಕೊಡುವಾಗ ಅಂತಹ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಇದನ್ನು ಪರಿಶೀಲಿಸಲು ಇಚ್ಛೆಪಡುತ್ತದೆ.

ಶ್ರೀ ಆರ್. ರಾಮಯ್ಯ.—(ಆಬ್ಸೆಂಟ್)

೬. ಹೆಚ್.ಡಿ. ಕೋಟೆ ಕ್ಷೇತ್ರದಲ್ಲಿ ಜೀತಮುಕ್ತರಿಗೆ ಪರಿಹಾರ, ಸೌಲಭ್ಯ ನೀಡುವಾಗ ದುರುಪಯೋಗವಾಗಿರುವುದನ್ನು ಸರಿಪಡಿಸಲು ಮನವಿ.

ಶ್ರೀ ಎಂ. ಶಿವಣ್ಣ —ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಗುರ್ತಿಸಲಾಗಿರುವಂತಹ ಜೀತಮುಕ್ತರಿಗೆ ಜೀತವಿಮುಕ್ತ ಪರಿಹಾರ ಸೌಲಭ್ಯ ನೀಡುವಾಗ ಅನೇಕ ದುರುಪಯೋಗವಾಗುತ್ತಿದೆ. ಅರ್ಹವಲ್ಲದ ವ್ಯಕ್ತಿಗಳಿಗೆ ಸೌಲಭ್ಯಗಳನ್ನು ನೀಡಿ ದುರುಪಯೋಗಮಾಡುತ್ತಿರುವುದಕ್ಕೆ ನನ್ನ ಕ್ಷೇತ್ರದ ಹೆಚ್.ಡಿ.ಕೋಟೆ ಆಲನಹಳ್ಳಿ ಮಂಡಲ ಪಂಚಾಯಿತಿಯಲ್ಲಿ ದುರುಪಯೋಗಪಡಿಸಿರುವುದನ್ನು ಉದಾಹರಣೆಯಾಗಿ ಕೊಡಬಯಸುತ್ತೇನೆ. ಆಲನಹಳ್ಳಿ ಗ್ರಾಮದ ಚಿಕ್ಕವೀರೇಗೌಡ ಮಗ ನಂಜುಂಡಸ್ವಾಮಿ, ಕೃಷ್ಣಯ್ಯನ ಹಂಡಿ ಗ್ರಾಮದ ಶ್ರೀ ಹಿರೇಗೌಡ, ಎಂಬುವರ ಮನೆಯಲ್ಲಿ ಜೀತ ಮಾಡಿಕೊಂಡಿದ್ದು, ಇವರ ಹೆಸರಲ್ಲಿ ಜೀತ ವಿಮುಕ್ತ ಪರಿಹಾರ ಪಟ್ಟಿಯಲ್ಲಿ ಸೇರ್ಪಡೆಯಾಗಿತ್ತು. ಇವರು ಕಾಲವಾದ ನಂತರ ೧೯೮೭ರಲ್ಲಿ ಜೀತ ವಿಮುಕ್ತ ಪರಿಹಾರವನ್ನು ಇವರ ಪತ್ನಿಯಾದ ಶ್ರೀಮತಿ ದೇವಿರಮ್ಮನವರಿಗೆ ಕೊಡಲಾಗಿತ್ತು.

ಆದರೆ ಇತ್ತೀಚೆಗೆ ಮಂಡಲ ಪಂಚಾಯ್ತಿಯಿಂದ ಜೀತವಿಮುಕ್ತ ಪರಿಹಾರವನ್ನು ನೀಡುವಾಗ ಜೀತವಿಮುಕ್ತನಲ್ಲದ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿಯಾಗಿದ್ದಂತಹ ನಂಜುಂಡಯ್ಯನ ಮಗ ನಂಜುಂಡಸ್ವಾಮಿ ಎಂಬ ಬೇರೊಬ್ಬ ವ್ಯಕ್ತಿಗೆ ಸೌಲಭ್ಯ ನೀಡಲಾಯಿತು. ಪರಿಷ್ಕಾರ ಸೌಲಭ್ಯ ನೀಡುವುದರಲ್ಲಿ ಅನ್ಯಾಯವಾಗಿದೆ ಎಂದು ಮೈಸೂರು ಜಿಲ್ಲಾ ಪರಿಷತ್ ಸಭೆಯಲ್ಲಿ ಜಿಲ್ಲಾ ಪರಿಷತ್ ಸದಸ್ಯರಾದ ಶ್ರೀ ಹೆಚ್.ಸಿ. ಶಿವಣ್ಣ ಎಂಬುವರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ನಾನು ಸಹ ಟೆಂಬಲಿಸಿ ಈ ವಿಷಯದಲ್ಲಿ ತನಿಖೆ ಆಗ್ರಹಪಡಿಸಲಾಯಿತು. ಈ ಸಂದರ್ಭದಲ್ಲಿ ಆಲನಹಳ್ಳಿ ಮಂಡಲ ಪಂಚಾಯ್ತಿ ಪ್ರಧಾನರು, ಜೀತ ವಿಮುಕ್ತರ ಸೌಲಭ್ಯದಲ್ಲಿ ಯಾವುದೇ ದುರುಪಯೋಗವಾಗಿರುವುದಿಲ್ಲವೆಂದು ಆಗಿದ್ದ ಪಕ್ಷದಲ್ಲಿ ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ, ಇಲ್ಲದಿದ್ದಲ್ಲಿ ಈ ಆರೋಪವನ್ನು ಮಾಡಿರತಕ್ಕಂತಹ ಜಿಲ್ಲಾ ಪರಿಷತ್ ಸದಸ್ಯರು ಹಾಗೂ ಶಾಸಕರು ರಾಜೀನಾಮೆ ಕೊಡಬೇಕೆಂದು ತಾಲ್ಲೂಕು ಪಂಚಾಯತಿ ಸಭೆ ಮತ್ತು ಪತ್ರಿಕೆಗಳ ಮುಖೇನ ಸವಾಲೊಡ್ಡಿದ್ದರು.